## ಇದು ಬೆಂಗಳೂರು









# ಕಿರುತೆರೆಯ ಹಿರಿ ಸಮಾರಂಭ

ಐಕ್ಯ ಟೆಲಿವಿಷನ್ ಕೇಬಲ್ (ಐಟಿಸಿ) ಕನ್ನಡ ಟಿವಿ ಧಾರಾವಾಹಿಗಳಿಗೆ ಪ್ರಶಸ್ತಿಗಳನ್ನು ನೀಡುವ ಮೂಲಕ ಕಿರುತೆರೆ ಕಲಾವಿದರನ್ನೂ ಪ್ರೋತ್ಸಾಹಿಸಿತು. ಇದಕ್ಕಾಗಿ ಅರಮನೆ ಮೈದಾನದಲ್ಲಿ ನಡೆದ ವರ್ಣರಂಜಿತ ಕಾರ್ಯಕ್ರಮದಲ್ಲಿ ಕಿರುತೆರೆಯ ಕಲಾವಿದರು, ತಂತ್ರಜ್ಞರು, ಅಭಿಮಾನಗಳ ದೊಡ್ಡ ಬಳಗವೇ ಸೇರಿತ್ತು.

ಜೀವಿತಾವಧಿ ಸಾಧನೆಯ ಪ್ರಶಸ್ತಿಗೆ ಎಚ್.ಎಂ.ಕೆ. ಮೂರ್ತಿ, ಸಿಹಿಕಹಿ. ಚಂದ್ರು, ಎಂ.ಎಸ್.ನರಸಿಂಹಮೂರ್ತಿ ಮತ್ತು ಅಪರ್ಣಾ ಪಾತ್ರರಾದರು. ರವಿಕಿರಣ್ ಅವರಿಗೆ ಎವರ್‌ಗ್ರೀನ್ ಪ್ರಶಸ್ತಿಯನ್ನೂ ಇದೇ ಸಂದರ್ಭದಲ್ಲಿ ಪ್ರದಾನ ಮಾಡಲಾಯಿತು.

ಸಮಾರಂಭದಲ್ಲಿ ಕಿರುತೆರೆಯ ಪ್ರಮುಖ ನಟ–ನಟಿಯರು ವಿವಿಧ ಮನರಂಜನಾ ಕಾರ್ಯಕ್ರಮ ನೀಡಿದರು. ಇವರೊಂದಿಗೆ ರಘು ದೀಕ್ಷಿತ್ ಅವರ ಹಾಡುಗಳ ಮೋಡಿಗೆ ಹೆಜ್ಜೆ ಹಾಕದವರೇ ಇರಲಿಲ್ಲ. ಇದಲ್ಲದೆ ಶಾಸ್ತ್ರೀಯ ನೃತ್ಯ, ಕಾಲನ್ನೇ ಬಳಸದೇ ಮಾಡಿದ ನೃತ್ಯ ಎಲ್ಲರ ಗಮನ ಸೆಳೆಯಿತು. ಇದು ಕಿರುತೆರೆಯ ಬೃಹತ್ ಸಮಾರಂಭವೆಂದೇ ದಾಖಲಾಯಿತು.